ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct 2022, Pp. 54-59.
©IIMRD, Mysuru
IIMRD JOURNALS
www.iimrd.com

# ವೆಂಕಟಗಿರಿ ಕಾಲೋನಿಯ ಜೇನುಕುರುಬ ಮಕ್ಕಳ ಶಿಕ್ಷಣ: ಒಂದು ಅಧ್ಯಯನ

**ಲೋಕೇಶ್.ಎಂ* ಮತ್ತು ಪ್ರೊ. ಎಂ.ಆರ್. ಗಂಗಾಧರ್****
ಸಂಶೋಧನಾ ವಿದ್ಯಾರ್ಥಿ* ಮತ್ತು ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು**
ಮಾನವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು.

***ಸಾರಾಂಶ: (Abstract)***

*ಶಿಕ್ಷಣವು ದೇಶದ ಸಂಪತ್ತಾಗಿರುವ ಮಕ್ಕಳನ್ನು ಪ್ರತಿಭಾವಂತರಾಗಿ ಅವರನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡುವುದು. ಶಿಕ್ಷಣವು ಸಹ ಮಾನವನ ಮೂಲಭೂತ ಹಕ್ಕುಗಳಲ್ಲಿ ಒಂದಾಗಿದ್ದು, ಅದರ ಜೊತೆಗೆ ಆಹಾರ, ವಸತಿ ಮತ್ತು ನೀರಿನ ಸೌಕರ್ಯವನ್ನು ಒದಗಿಸುವುದು ಅವಶ್ಯಕವಾಗಿದೆ. ಶಿಕ್ಷಣವು ದೇಶದ ಉತ್ಪಾದಕತೆ ಮತ್ತು ಆದಾಯದ ಬೆಳವಣಿಗೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ. ಶಿಕ್ಷಣವು ತನ್ನ ಪೀಳಿಗೆಯ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ರೀತಿ–ರಿವಾಜುಗಳ ಬಗ್ಗೆ ತಿಳಿದುಕೊಳ್ಳುವ ಮತ್ತು ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದಕ್ಕೆ ಅವಶ್ಯಕವಾಗಿರುತ್ತದೆ. ಪ್ರಸ್ತುತ ಲೇಖನದಲ್ಲಿ ಜೇನುಕುರುಬ ಬುಡಕಟ್ಟು ಮಕ್ಕಳ ಶಿಕ್ಷಣ ಕುರಿತು ವಿಮರ್ಶಿಸಲಾಗಿದೆ.*

***ಮುಖ್ಯಪದಗಳು (Keywords):*** *ಜೇನುಕುರುಬ, ಬುಡಕಟ್ಟು ಮಕ್ಕಳು, ಶಿಕ್ಷಣ, ಯೋಜನೆಗಳು.*

## ಪೀಠಿಕೆ

ಶಾಲಾ ಶಿಕ್ಷಣವನ್ನು ಸ್ವಾತಂತ್ರ್ಯ ಪೂರ್ವದಿಂದಲೂ ಸಾರ್ವತ್ರೀಕರಣಗೊಳಿಸಬೇಕೆನ್ನುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿದೆ. ಬುಡಕಟ್ಟು ಮಕ್ಕಳು ಸಹಜವಾಗಿ ಅಲೆಮಾರಿನ ಹಾಗು ಯಾರೊಂದಿಗೂ ನೇರವಾಗಿ ವ್ಯವಹರಿಸದ ಮುಜುಗರ ಸ್ವಭಾವದವರಾಗಿದ್ದು, ಅವರಿಗೆ ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆಯ ಬಲವರ್ಧನೆಗೆ ಭಾರತದ ಸಂವಿಧಾನದ ಪ್ರಕಾರ 6 ರಿಂದ 14 ವರ್ಷದ ವಯಸ್ಸಿನ ಎಲ್ಲಾ ಮಕ್ಕಳಿಗೂ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ನೀಡಬೇಕೆಂಬುದಾಗಿದೆ ಮತ್ತು ಅವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಶಿಕ್ಷಣವನ್ನು ಒದಗಿಸುವುದು ಅವಶ್ಯಕವಾಗಿದೆ. ಸಂವಿಧಾನದ 4ನೇ ಅಧ್ಯಾಯದ ರಾಜ್ಯ ನಿರ್ದೇಶನಾತ್ಮಕ ತತ್ವದ 45ನೇ ಪರಿಚ್ಛೇದದಲ್ಲಿ ಹತ್ತು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಹಾಗು ಉಚಿತ ಶಿಕ್ಷಣವನ್ನು ಒದಗಿಸಲು ಆಯಾ ರಾಜ್ಯ ಸರ್ಕಾರಗಳು ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು ಎಂದು ನಿರ್ದೇಶಿಸಿದೆ. ಸಂವಿಧಾನದ 324, 330, 332, 335, 338 ಮತ್ತು 342ನೇ ವಿಧಿಗಳನ್ವಯ ಬುಡಕಟ್ಟು ಜನಾಂಗದವರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

***Please cite this article as:*** ಲೋಕೇಶ್.ಎಂ. ಮತ್ತು ಪ್ರೊ. ಎಂ.ಆರ್. ಗಂಗಾಧರ್ (2022). ವೆಂಕಟಗಿರಿ ಕಾಲೋನಿಯ ಜೇನುಕುರುಬ ಮಕ್ಕಳ ಶಿಕ್ಷಣ: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ. 54–59.*

ಸಾಮಾನ್ಯವಾಗಿ ಒಂದು ದೇಶದ ಮೂಲನಿವಾಸಿಗಳನ್ನು ಆದಿವಾಸಿಗಳು ಅಥವಾ ಬುಡಕಟ್ಟು ಜನಾಂಗ ಎಂದು ಕರೆಯಲಾಗುತ್ತದೆ. ಬುಡಕಟ್ಟು ಎಂಬ ಪದವನ್ನು ಇಂಗ್ಲೀಷ್‌ನ 'TRIBE' ಎಂಬ ಪದಕ್ಕೆ ಸಮಾನವಾಗಿ ಬಳಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಬುಡಕಟ್ಟು ಪದಕ್ಕೆ ಪರ್ಯಾಯವಾಗಿ ಆದಿವಾಸಿಗಳು ಎಂದು ಬಳಸಲಾಗುತ್ತಿದೆ. ಒಂದು ನಿರ್ದಿಷ್ಟವಾದ ಭಾಷೆ, ಒಂದೇ ರೀತಿಯ ನೆಲೆ, ಸಾಮಾಜಿಕ ನೆಲೆಗಳನ್ನು ಒಳಗೊಂಡಂತೆ ಬೆಟ್ಟಗುಡ್ಡಗಳಲ್ಲಿ, ಅರಣ್ಯ, ಕಣಿವೆಯಲ್ಲಿ ವಾಸಿಸುವ ಅರೆನಾಗರೀಕ ಜನರೆಂದು ಪರಿಗಣಿಸಲಾಗಿದೆ.

**ಅಧ್ಯಯನದ ಉದ್ದೇಶಗಳು ಮತ್ತು ಗುರಿ**

- ಜೇನುಕುರುಬ ಬುಡಕಟ್ಟು ಜನಾಂಗದ ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿಯುವುದು
- ಜೇನುಕುರುಬ ಬುಡಕಟ್ಟು ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಗೆ ಕಾರಣಗಳನ್ನು ತಿಳಿಯುವುದು
- ಜೇನುಕುರುಬ ಬುಡಕಟ್ಟು ಮಕ್ಕಳು ಶಾಲೆಗೆ ಹೋಗುತ್ತಿರುವ ಮತ್ತು ಮಧ್ಯಂತರದಲ್ಲಿ ಶಾಲೆಯನ್ನು ಬಿಟ್ಟಿರುವ ಮಕ್ಕಳ ಪ್ರಮಾಣ ತಿಳಿಯುವುದು ಹಾಗೂ ಬಿಡಲು ಕಾರಣಗಳನ್ನು ಅಧ್ಯಯನ ಮಾಡುವುದು
- ಜೇನುಕುರುಬ ಬುಡಕಟ್ಟು ಮಕ್ಕಳು ಶಾಲೆಯಿಂದ ಹೊರಗುಳಿಯುವುದರಿಂದ ಪರಿಣಾಮಗಳು ಮತ್ತು ಪರಿಹಾರಗಳನ್ನು ತಿಳಿಸುವುದು

**ಮಾದರಿ ವಿಧಾನ**

ಜೇನುಕುರುಬ ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಾನಮಾನಗಳು ಹಾಗು ಹಿಂದುಳಿದಿರುವಿಕೆಗೆ ಹಲವಾರು ಅಧ್ಯಯನಗಳು ನೆಡೆದಿದ್ದು, ಅಂತಹ ಅಧ್ಯಯನಗಳು ಸಾಮಾನ್ಯವಾದ ವಿಚಾರಗಳನ್ನು ತಿಳಿಸುವಲ್ಲಿ ಸಹಾಯಕವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಕುಟುಂಬ ಆಧಾರಿತ ಅಧ್ಯಯನವಾಗಿದ್ದು ಜೇನುಕುರುಬ ಸಮುದಾಯದ 50 ಕುಟುಂಬಗಳನ್ನು ಸರಳ ಯಾದೃಚ್ಛಿಕ ಮಾದರಿಯಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನಗಳು ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಾನಮಾನಗಳು, ಕೌಶಲ್ಯ ಮತ್ತು ತರಬೇತಿಯು ಸಮಾಜದಲ್ಲಿ ಅವರಿಗೇ ಆದ ಹಕ್ಕುಗಳು ದೊರೆಯುವುದನ್ನು ಗುರುತಿಸಲಾಗಿದೆ.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ರಾಜ್ಯ ಮತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಗಿರಿಜನ ಸಂಶೋಧನಾ ಸಂಸ್ಥೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ದೊರೆಯುವ ದಾಖಲೆಗಳು, ವರದಿಗಳು, ಗ್ರಂಥಗಳು, ನಿಯತಕಾಲಿಕೆಗಳು, ಸಂಶೋಧನಾ ಮಹಾಪ್ರಬಂಧಗಳು, ಲೇಖನಗಳು ಮತ್ತು ಅಂತರ್ಜಾಲಗಳ ಮೂಲಗಳಿಂದ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಅವಲೋಕನ ವಿಧಾನ, ಸಂದರ್ಶನ ವಿಧಾನ,

ಸಂದರ್ಶನ ಅನುಸೂಚಿ, ಪ್ರಕರಣ/ಪಸಂಗ ಅಧ್ಯಯನ, ಕುಟುಂಬ ಸಮೀಕ್ಷೆ, ಗುಂಪು ಚರ್ಚೆ ಮುತಾದ ವಿಧಾನಗಳನ್ನು ಬಳಸಿಕೊಂಡು ಕ್ಷೇತ್ರಕಾರ್ಯ ನಡೆಸಿ ಮಾಹಿತಿ ಸಂಗ್ರಹಿಸಲಾಗಿದೆ.

**ಕ್ಷೇತ್ರ ಪರಿಚಯ ಮತ್ತು ಭೌಗೋಳಿಕ ಹಿನ್ನಲೆ**

ಪ್ರಸ್ತುತ ಅಧ್ಯಯನಕ್ಕೆ ಜೇನುಕುರುಬ ಬುಡಕಟ್ಟು ಸಮುದಾಯದವರು ನೆಲೆಸಿರುವ ಮೈಸೂರು ಜಿಲ್ಲೆಯ ವೆಂಕಟಗಿರಿ ಕಾಲೋನಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಈ ಕಾಲೋನಿಯು ಮೈಸೂರಿನಿಂದ ಸುಮಾರು 65.ಕಿ.ಮೀ. ದೂರದಲ್ಲಿ ಕಂಡುಬರುತ್ತದೆ. ಈ ಕಾಲೋನಿಯು ಸುಂದರವಾದ ಪರಿಸರವನ್ನು ಹೊಂದಿದ್ದು, ಸುತ್ತಮುತ್ತಲು ಗುಡ್ಡ–ಗಾಡು ಪ್ರದೇಶಗಳನ್ನು ಹೊಂದಿದೆ. ಈ ಕಾಲೋನಿಯು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹಾದನೂರು ಅಂಚೆ ಮತ್ತು ಹುಲ್ಲಹಳ್ಳಿ ವ್ಯಾಪ್ತಿಯಲ್ಲಿ ಕಂಡುಬರುತ್ತದೆ. ಈ ಜನಾಂಗದ ಶೇ.80 ರಷ್ಟು ಕೂಲಿ ಮತ್ತು ಪ್ರಾಣಿ ಸಾಕಾಣಿಕೆಯನ್ನು ಮಾಡುತ್ತಾರೆ.

ಜೇನುಕುರುಬ ವೆಂಕಟಗಿರಿ ಕಾಲೋನಿಯಲ್ಲಿ ವಾಸಿಸುವ ಮಕ್ಕಳು ಶಿಕ್ಷಣದಿಂದ ಹೇಗೆ ವಂಚಿತರಾಗಿದ್ದಾರೆ ಮತ್ತು ಶಿಕ್ಷಣದ ಅರಿವು ತಿಳಿಯದೇ ಇರುವುದು, ಅಲ್ಲಿನ ಮಕ್ಕಳು ಶಾಲೆ ಬಿಡಲು ಕಾರಣವಾಗಿರುತ್ತದೆ. ಈ ಜನಾಂಗದ ಮಕ್ಕಳು ಶಾಲೆಗೆ ಹೋಗುವ ಸಂಖ್ಯೆ ಕಡಿಮೆ ಇದ್ದು, ಅವರಲ್ಲಿ ಕೆಲವರು ಶಾಲೆಯನ್ನು ಬಿಟ್ಟಿದ್ದು, ಇವರಿಗೆ ರಾಜ್ಯ ಸರ್ಕಾರದಿಂದ ಸರ್ಕಾರಿ ಆಶ್ರಮ ಶಾಲೆಯನ್ನು ಕಲ್ಪಿಸಿಕೊಡಲಾಗಿದೆ ಹಾಗೂ ಉಚಿತ ಊಟ, ವಸತಿ ವ್ಯವಸ್ಥೆಯನ್ನು ಒದಗಿಸಲಾಗಿದ್ದು, ಇಲ್ಲಿ ಒಂದರಿಂದ ಏಳನೇ ತರಗತಿಯವರೆಗೆ ಶಿಕ್ಷಣವನ್ನು ನೀಡಲಾಗುತ್ತಿದೆ. ಸ್ವಗ್ರಾಮದಲ್ಲಿ ಓದು ಮುಗಿದ ನಂತರ ಹೆಣ್ಣು ಮಕ್ಕಳನ್ನು ಬೇರೆ ಗ್ರಾಮದ ಶಾಲೆಗೆ ಕಳುಹಿಸಲು ನಿರಾಸಕ್ತಿಯನ್ನು ತೋರುತ್ತಿದ್ದಾರೆ.

**ಕೋಷ್ಟಕ – 1: ಜೇನುಕುರುಬ ವೆಂಕಟಗಿರಿ ಕಾಲೋನಿಯ ಜನಾಂಗದ ವಿವರ**

| ವಯಸ್ಸು | ಪುರುಷರು | ಶೇ. | ಸ್ತ್ರೀಯರು | ಶೇ. | ಒಟ್ಟು | ಶೇ. |
|---|---|---|---|---|---|---|
| 0–04 | 3 | 1.3% | 8 | 3.6% | 11 | 5% |
| 5–9 | 9 | 4% | 7 | 3.1% | 16 | 9.2% |
| 10–14 | 7 | 3.1% | 8 | 3.6% | 17 | 7.7% |
| 15–19 | 11 | 5% | 10 | 4.5% | 21 | 9.5% |
| 20–24 | 19 | 8.6% | 16 | 7.2% | 35 | 15.9% |
| 25–44 | 38 | 12.7% | 22 | 10% | 50 | 22.7% |
| 45–64 | 31 | 14% | 26 | 11.8% | 57 | 25.9% |
| 64–79 | 6 | 2.7% | 6 | 2.7% | 12 | 5.4% |
| 80ಕಿಂತ ಹೆಚ್ಚು | 1 | 0.45% | 0 | 0% | 1 | 0.4% |
| **ಒಟ್ಟು** | **115** | **100%** | **105** | **100%** | **220** | **100%** |

**ಕೋಷ್ಟಕ – 2: ಜೇನುಕುರುಬ ಬುಡಕಟ್ಟು ಜನಾಂಗದ ಶೈಕ್ಷಣಿಕ ಸ್ಥಾನಮಾನಗಳು**

| ವಿವರ | ಆವೃತ್ತಿ | ಶೇಕಡವಾರು |
|---|---|---|
| ಅನಕ್ಷರಸ್ಥರು | 85 | 39.09% |
| ಕಿರಿಯ ಪ್ರಾಥಮಿಕ ಶಾಲೆ | 91 | 41.36% |
| ಹಿರಿಯ ಪ್ರಾಥಮಿಕ ಶಾಲೆ | 21 | 9.5% |
| ಫ್ರೌಢಶಾಲೆ | 16 | 7.25% |
| ಪಿಯುಸಿ | 5 | 2.27% |
| ಪದವಿ ಮತ್ತು ಮೇಲ್ಪಟ್ಟು | 1 | 0.45% |
| **ಒಟ್ಟು** | **220** | **100%** |

**ಮೂಲ ಕ್ಷೇತ್ರಕಾರ್ಯ**

ಕೋಷ್ಟಕ 2ರಲ್ಲಿ ಜೇನುಕುರುಬ ಸಮುದಾಯದ ಶೈಕ್ಷಣಿಕ ಸ್ಥಾನಮಾನಗಳನ್ನು ಕುರಿತು ಹೇಳಲಾಗಿದ್ದು, ಒಟ್ಟು ಜನಸಂಖ್ಯೆಯಲ್ಲಿ ಶೇ.39.9ರಷ್ಟು ಅನಕ್ಷರಸ್ಥರಾಗಿದ್ದಾರೆ. ಇನ್ನುಳಿದಂತೆ ಒಟ್ಟು ಅನಕ್ಷರಸ್ಥರಲ್ಲಿ ಅತ್ಯಧಿಕ ಜನರು ಅಂದರೆ ಶೇ.41.36ರಷ್ಟು ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಪಡೆದಿರುವ ಶೇ.70ಕ್ಕೂ ಅಧಿಕ ಮಂದಿಗೆ ಸರಿಯಾಗಿ ಅಕ್ಷರವನ್ನು ಗುರುತಿಸಲು ಬರುವುದಿಲ್ಲವೆಂದು ಅಧ್ಯಯನದಿಂದ ತಿಳಿದು ಬಂದಿದೆ. ಇನ್ನುಳಿದಂತೆ ಶೇ.9.5ರಷ್ಟು ಹಿರಿಯ ಪ್ರಾಥಮಿಕ ಶಿಕ್ಷಣವನ್ನು, ಶೇ.9.5ರಷ್ಟು ಫ್ರೌಢಶಾಲಾ ಶಿಕ್ಷಣವನ್ನು, ಶೇ.2.27ರಷ್ಟು ಮಂದಿ ಪಿಯುಸಿಯನ್ನು ಹಾಗೂ ಶೇ.0.45ರಷ್ಟು ಪದವಿ ಮತ್ತು ಪದವಿ ಮೇಲ್ಪಟ್ಟು ಶಿಕ್ಷಣವನ್ನು ಪಡೆದಿದ್ದಾರೆ.

**ಕೋಷ್ಟಕ – 3: ಲಿಂಗವಾರು ಜೇನುಕುರುಬ ಬುಡಕಟ್ಟು ಜನಾಂಗದ ಶೈಕ್ಷಣಿಕ ಸ್ಥಾನಮಾನಗಳು**

| ವಿವರ | ಪುರಷರು | ಶೇಕಡವಾರು | ಮಹಿಳೆಯರು | ಶೇಕಡವಾರು |
|---|---|---|---|---|
| ಅನಕ್ಷರಸ್ಥರು | 49 | 22.2% | 37 | 37.16% |
| ಕಿರಿಯ ಪ್ರಾಥಮಿಕ ಶಾಲೆ | 52 | 23.6% | 39 | 17.7% |
| ಹಿರಿಯ ಪ್ರಾಥಮಿಕ ಶಾಲೆ | 8 | 3.6% | 13 | 5.9% |
| ಫ್ರೌಢಶಾಲೆ | 7 | 3.1% | 9 | 4% |
| ಪಿಯುಸಿ | 2 | 1% | 3 | 1.3% |
| ಪದವಿ ಮತ್ತು ಮೇಲ್ಪಟ್ಟು | 1 | 1% | 0 | 0% |
| **ಒಟ್ಟು** | **115** | **100%** | **105** | **100%** |

ಕೋಷ್ಟಕ 3ರಲ್ಲಿ ಹೇಳಿರುವಂತೆ ಜೇನುಕುರುಬ ಸಮುದಾಯದ ಶೈಕ್ಷಣಿಕ ಸ್ಥಾನಮಾನಗಳನ್ನು ಕುರಿತು ತೋರಿಸಲಾಗಿದೆ. ಇದರ ಪ್ರಕಾರ ಮಹಿಳೆಯರಿಗಿಂತ ಪುರುಷರಲ್ಲಿಯೇ ಅನಕ್ಷರತೆಯೇ ಹೆಚ್ಚಾಗಿದೆ. ಅನಕ್ಷರಸ್ಥರಲ್ಲಿ ಪುರುಷ ಮತ್ತು ಮಹಿಳೆ ಎರಡೂ ವಿಭಾಗಗಳಲ್ಲಿಯೂ ಕೂಡ ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಪಡೆದವರು ಅಧಿಕವಾಗಿದ್ದು, ಉನ್ನತ ಶಿಕ್ಷಣವನ್ನು ಪಡೆದವರು ಕಡಿಮೆಯಿದ್ದಾರೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಇಂದಿಗೂ ಕೂಡ ಜೇನುಕುರುಬ ಸಮುದಾಯದ ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಜೇನುಕುರುಬ ಬುಡಕಟ್ಟು ಸಮುದಾಯದ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಹಲವಾರು ಕಾರಣಗಳಿವೆ. ನಿರ್ದಿಷ್ಟವಾಗಿ ಇಂತಹದೇ ಕಾರಣ ಎಂದು ಹೇಳಲು ಸಾಧ್ಯವಿಲ್ಲವಾದ್ದರಿಂದ ಹಾಗು ಒಂದು ಸಮಸ್ಯೆಯೊಂದಿಗೆ ಮತ್ತೊಂದು ಸಮಸ್ಯೆ ಬೆಸೆದುಕೊಂಡಿದೆ. ಬಡತನ, ಪೋಷಕರ ಅನಕ್ಷರತೆ, ಮಕ್ಕಳ ನಿರಾಸಕ್ತಿ, ಬಾಲ್ಯವಿವಾಹ, ಬಾಲ ಕಾರ್ಮಿಕ ಪದ್ದತಿ, ಮೂಢನಂಬಿಕೆಗಳು, ಮನೆಯಿಂದ ಶಾಲೆಗಿರುವ ಅಂತರ ಪ್ರಮುಖವಾದ ಕಾರಣಗಳಾಗಿದೆ. ಹಾಗೆಯೇ ಜೇನುಕುರುಬ ಸಮುದಾಯದಲ್ಲಿ ಹೆಣ್ಣು ಮಕ್ಕಳು ಮಧ್ಯಂತರದಲ್ಲಿ ಶಾಲೆ ಬಿಡಲು ಮನೆಯಲ್ಲಿ ಅಡುಗೆ ಕೆಲಸ ಮಾಡುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಸೌದೆ ತರುವುದು, ಕೃಷಿ ಚಟುವಟಿಕೆಯಲ್ಲ ತೊಡಗುವುದು, ಮೆನೆಯಲ್ಲಿ ಕಿರಿಯ ಮಕ್ಕಳ ಪಾಲನೆ ಮಾಡುವುದು, ಪ್ರಾಣಿ ಸಾಕಾಣಿಕೆ ಮತ್ತು ಮೂಲಭೂತ ಸೌಕರ್ಯಗಳ ಕೊರತೆಗಳು ಪ್ರಮುಖವಾದ ಕಾರಣಗಳಾಗಿವೆ.

ಜೇನುಕುರುಬ ಬುಡಕಟ್ಟು ಮಕ್ಕಳ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಶಾಲೆಯ ಭೌತಿಕ ಸಮಸ್ಯೆಗಳಾದ ಕುಡಿಯುವ ನೀರಿನ ಸಮಸ್ಯೆ, ಕೊಠಡಿಗಳ ಸಮಸ್ಯೆ, ಶೌಚಾಲಯ, ಗ್ರಂಥಾಲಯ, ವಿದ್ಯುತ್ ಸೌಲಭ್ಯ, ಶಾಲೆಯ ಸಮಯ, ಶಾಲೆಯಿಂದ ಹಾಡಿಗೆ ಇರುವ ಅಂತರ, ಶೈಕ್ಷಣಿಕ ಕೊರತೆ, ಶಿಕ್ಷಕರ ನಡವಳಿಕೆ, ಮನೆಗೆಲಸಕ್ಕೆ ಮಕ್ಕಳನ್ನು ಬಳಸಿಕೊಳ್ಳುವುದು ಪ್ರಮುಖವಾದ ಅಂಶಗಳಾಗಿದೆ. ಹಾಗೆಯೇ ಇವರ ಹಿಂದುಳಿಯುವಿಕೆಗೆ ಕಾರಣಗಳಾದ ಅರ್ಥವಾಗದ ಪಠ್ಯಕ್ರಮ, ಒತ್ತಡ, ಮಾನಸಿಕ ಗೊಂದಲಗಳು, ನಿರಾಸಕ್ತಿ, ಕೊಠಡಿಗಳ ಕೊರತೆ, ಭೋದನೆಯ ಕೊರತೆ, ಶಿಕ್ಷಕರ ಗೈರು ಹಾಜರಾತಿ ಅಡೆತಡೆಗಳಾಗಿವೆ. ಅಷ್ಟೇ ಅಲ್ಲದೇ ಶಿಕ್ಷಣದ ಬಗ್ಗೆ ಅವರಿಗಿರುವ ಆಸಕ್ತಿಯ ಕೊರತೆ, ಆರೋಗ್ಯದ ಸಮಸ್ಯೆಗಳು, ಉತ್ತಮವಾದ ಆಸ್ಪತ್ರೆಗಳಿಲ್ಲದಿರುವುದು, ಫೌಢವಸ್ಥೆ ಮತ್ತು ಶಾಲೆಯ ಬಗೆಗಿನ ಭಯವು ಹಿಂದುಳಿದಿರುವಿಕೆಗೆ ಕಾರಣಗಳಾಗಿದೆ. ಈ ಬುಡಕಟ್ಟು ವಾಸಿಸುವ ಸುತ್ತಮುತ್ತಲಿನ ಪರಿಸರವೂ ಪ್ರಮುಖವಾದ ಕಾರಣವಾಗಿದ್ದು, ಶಾಲೆಗಳು ಕಾಡಿನ ಅಂಚಿನಲ್ಲಿದ್ದು, ಅಂತಹ ಶಾಲೆಗೆ ಮಕ್ಕಳು ಹೋಗಲು ಮತ್ತು ಬರುವುದಕ್ಕೆ ಮೂಲಸೌಕರ್ಯದ ಕೊರತೆಯಿದ್ದು, ಕಾಡು ಪ್ರಾಣಿಗಳ ಮೇಲಿನ ಭಯದಿಂದ ಶಾಲೆಯಿಂದ ದೂರ ಉಳಿಯುತ್ತಾರೆ.

ಜೇನುಕುರುಬ ಬುಟಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಈ ಕೆಳಗಿನ ಸಲಹೆಗಳನ್ನು ನೀಡಲಾಗಿದೆ.

- ಆಶ್ರಮ ಶಾಲೆಗಳನ್ನು ಕನಿಷ್ಟ ಪಿಯುಸಿಯ ತನಕ ವಿಸ್ತರಿಸುವುದು ಮತ್ತು ಬುಡಕಟ್ಟು ಪೋಷಕರಲ್ಲಿ ಶೈಕ್ಷಣಿಕ ಬಗ್ಗೆ ಅರಿವು ಮೂಢಿಸುವುದು

- ಬುಡಕಟ್ಟು ಸಂಸ್ಕೃತಿಗೆ ಅನುಗುಣವಾಗಿ ಕಾರ್ಯಕ್ರಮ ರೂಪಿಸುವುದು ಹಾಗು ಬುಡಕಟ್ಟು ಮಕ್ಕಳನ್ನು ಆಕರ್ಷಿಸಲು ಪ್ರೋತ್ಸಾಹ ಧನ ನೀಡುವುದು
- ಬುಡಕಟ್ಟು ಮಕ್ಕಳ ಬಡತನ ನಿವಾರಣೆಗೆ ಇರುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದೆ ಜೇನುಕುರುಬ ಸಮುದಾಯದ ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಮೂಲ ಸೌಕರ್ಯಗಳನ್ನು ಒದಗಿಸುವುದು, ಗ್ರಾಮದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಮತ್ತು ಕಾಳಜಿ ಹೆಚ್ಚಾಗಲು ಸೌಲಭ್ಯಗಳನ್ನು ಒದಗಿಸುವುದು. ಅವರಿಗೆ ಅರ್ಥವಾಗುವಂತಹ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಛಾಯಚಿತ್ರಗಳನ್ನು ಗ್ರಾಮದಲ್ಲಿ ಚಿತ್ರಿಸುವುದು, ಶಾಲೆಗೆ ಸೇರಿಸುವ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಅನೇಕ ಮಕ್ಕಳು ಪೋಷಕರೊಂದಿಗೆ ಕೂಲಿಗೆಹೋಗುವುದು, ಮನೆ ಕೆಲಸದಲ್ಲಿ ಭಾಗಿಯಾಗುವುದು, ಹೈನುಗಾರಿಕೆಯಲ್ಲಿ ತೊಡಗುವುದರಿಂದ ಶೇ.45 ರಷ್ಟು ಮಕ್ಕಳು ಮಾತ್ರ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇನ್ನುಳಿದ ಶೇ.55 ರಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇವೆಲ್ಲವನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ಶಿಕ್ಷಣದ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಹಾಗು ಸರ್ಕಾರದಿಂದ ಶಿಕ್ಷಣಕ್ಕೆ ದೊರೆಯುವ ಸೌಲಭ್ಯಗಲ ಬಗ್ಗೆ ತಿಳಿಸುವುದು ಅವಶ್ಯಕವಾಗಿದೆ.

**ಪರಾಮರ್ಶನ ಗ್ರಂಥಗಳು**


- ಮಂಜುನಾಥ. ಬಿ.ಆರ್ (2014). ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು.ವಿ.ವಿ., ಮೈಸೂರು.
- ಮಧು ಗುಂಡ್ಲುಪೇಟೆ. (2002). ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ. ಅಕ್ಷತಾ ಪ್ರಕಾಶನ, ಮೈಸೂರು.
- ಹಿ.ಚಿ. ಬೋರಲಿಂಗಯ್ಯ, (2011). ಒಂದು ಬುಡಕಟ್ಟಿನ ಲೋಕದೃಷ್ಟಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
- Mysore District Hand Book. Government of Karnataka, Bangalore.
- Thurston.E. (1909). Caste and Tribes of Southern India, Cosmo Publication, New Delhi.